[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 457/2024**

ಪಿಡ್ಬ್ಲೂಃ 1 ಸಿಡ್ಲ್ಯೂಃ 1

ಸಾಕ್ಷಿದಾರನ ಹೆಸರು : ನಿರಂಜನ್ ಕುಮಾರ್
ತಂದೆಯ ಹೆಸರು : ಅದಿರಾಜ್ ಮುಧ್ಯ
ಪ್ರಾಯ : 56 ವರ್ಷ
ಉದ್ಯೋಗ : ವ್ಯಾಪಾರ
ವಾಸ : ಬಜಗೋಳಿ , ಮುಡಾರು

ದಿನಾಂಕ 31.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಚಾಸಾ-2 ರಿಂದ 4 ರವರ ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು.

ದಿಃ26.10.2023 ರಂದು ಬೆಳಿಗ್ಗೆ 6.00 ರಿಂದ 6.30 ಗಂಟೆ ಸಮಯದಲ್ಲಿ ನಮ್ಮ ಮನೆಯ ಹಸು ಗೇಟಿನಿಂದ ಹೊರಗೆ ಹೋಗಿದ್ದಾಗ ಲೈಲಾಂಡ್ ಲಾರಿ ಬಂದು ನನ್ನ ಹಸುವಿಗೆ ಢಿಕ್ಕಿಪಡಿಸಿರುತ್ತಾರೆ. ಸದ್ರಿ ಲಾರಿಯನ್ನು ಆರೋಪಿ ಅತೀವೇಗದಿಂದ ಚಲಾಯಿಸುತ್ತಿದ್ದನು. ಢಿಕ್ಕಿಪಡಿಸಿದ ಪರಿಣಾಮ ನನ್ನ ಹಸುವಿನ ಹಿಂದಿನ ಕಾಲು ಮುರಿದಿರುತ್ತದೆ.ಸದ್ರಿ ಸಮಯದಲ್ಲಿ ನನ್ನ ಹಸು ಗಬ್ಬದ ಹಸು ಆಗಿತ್ತು. ಹೀಗೆ ಇರುವಾಗ ನನಗೆ ರೂ.25,000/- ರಿಂದ 35,000/- ನಷ್ಟವಾಗಿದೆ. ಈ ಘಟನೆಗೆ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಲಾನೆಯೇ ಕಾರಣವಾಗಿರುತ್ತದೆ.

2. ಈ ಘಟನಯ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಈಗ ಸದ್ರಿ ದೂರನ್ನು ನೋಡಿದ್ದು ಅದರಲ್ಲಿರುವ ನನ್ನಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದ್ರಿ ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ದಿ:29.10.2023 ರಂದು ನಾನು ಘಟನೆ ಸ್ಥಳವನ್ನು ತೋರಿಸಿಕೊಟ್ಟಂತೆ ಸ್ಥಳ ಮಹಜರನ್ನು ನನ್ನ ಹಾಗೂ ಚಾಸಾ-3 ಮತ್ತು 4 ರವರ ಸಮಕ್ಷಮ ಮಾಡಿರುತ್ತಾರೆ. ಸದ್ರಿ ಮಹಜರನ್ನು ಮಧ್ಯಾಹ್ನ 1.30 ರಿಂದ 2.00 ಗಂಟೆಯವರೆಗೆ ಮಾಡಿರುತ್ತಾರೆ. ಸ್ಥಳದಲ್ಲಿ ನಕ್ಷೆಯನ್ನು ಸಹ ಮಾಡಿರುತ್ತಾರೆ. ಸ್ಥಳ ಮಹಜರು ಮಾಡುವಾಗ ಫೋಟೋಗಳನ್ನು ತೆಗೆದಿರುತ್ತಾರೆ.

3. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆ ತಕ್ಷೀರು ಸ್ಥಳ ಮಹಜರು ಆಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸ್ಥ,ಳದಲ್ಲಿ ತೆಗೆದ ಫೋಟೊಗಳನ್ನು ಈಗ ನೋಡಿ ಗುರುತಿಸಿದ್ದೇನೆ. ಸದ್ರಿ ಫೋಟೊವನ್ನು ನಿಪಿ-4 ಎಂದು ಗುರುತಿಸಲಾಯಿತು.

4. ದಿ:29.10.2023 ರಂದು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಹಾಗೂ ಚಾಸಾ-3 ಮತ್ತು 4 ರವರ ಸಮಕ್ಷಮ ಕೆಎ-20-ಡಿ -4903 ಆಶೋಕ್ ಲೈಲಾಂಡ್ ಕಂಪನಿಯ ಟಿಪ್ಪರ್ ವಾಹನವನ್ನು ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರನ್ನು ಮಧ್ಯಾಹ್ನ ಮಾಡಿರುತ್ತಾರೆ. ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಮತ್ತು ಪೊಲೀಸರು ಫೊಟೋವನ್ನು ತೆಗೆದಿರುತ್ತಾರೆ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆ ಸ್ವತ್ತು ಸ್ವಾಧೀನತಾ ಮಹಜರು ಆಗಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಫೋಟೊವನ್ನು ಈಗ ನೋಡಿ ಗುರುತಿಸಿದ್ದೇನೆ. ಸದ್ರಿ ಫೋಟೊವನ್ನು ನಿಪಿ-6 ಎಂದು ಗುರುತಿಸಲಾಯಿತು.

5. ಅಪಘಾತಕ್ಕೆ ಒಳಗಾದ ನನ್ನ ಹಸು ದಿಃ31.10.2023 ರಂದು ಮೃತಪಟ್ಟಿರುತ್ತದೆ. ಈ ಬಗ್ಗೆನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ಹಸುವಿನ ಭಾವಚಿತ್ರ ಹಾಗೂ ಹಸುವಿಗೆ ಢಿಕ್ಕಿಪಡಿಸಿದ ಟಿಪ್ಪರ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಟಿಪ್ಪರ್ ವಾಹನದ 4 ಫೋಟೋವನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಫೋಟೋಗಳನ್ನು ಒಟ್ಟಾಗಿ ನಿಪಿ-7 ಎಂದು, ನನ್ನ ದನದ 3 ಭಾಚಿತ್ರವನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಆರ್ ಎಸ್ ವಕೀಲರಿಂದಃ

6. ನಮ್ಮ ಮನೆಯ ಹತ್ತಿರ ಚಾಸಾ-3 ಸದಾನಂದ ಪೂಜಾರಿಯವರ ಮನೆ ಇದೆ. ನಿಪಿ-3 ನಕ್ಷೆಯಲ್ಲಿ ಚಾಸಾ-3 ರವರ ಮನೆ ಕಾಣಿಸುವುದಿಲ್ಲ. ಚಾಸಾ-3 ರವರ ಮನೆಯ ಮುಂದೆ ಈ ಪ್ರಕರಣದ ಘಟನೆ ಆಗಿದೆ ಎಂದು ನಿಪಿ-3 ರಲ್ಲಿ ಕಂಡುಬರುವುದಿಲ್ಲ. ಚಾಸಾ-3 ರವರ ಮನೆಯ ಮುಂದೆ 14 ಅಡಿ ಅಗಲದ ರಸ್ತೆ ಇದೆ. ನನ್ನ ಮನೆಯಿಂದ ಅವರ ಮನೆ ಅರ್ಧ ಕಿ ಮೀ ದೂರದಲ್ಲಿ ಇದೆ. ಈ ಪ್ರಕರಣದ ಘಟನೆ ಆಗಿದೆ ಎಂದು ನನಗೆ ಚಾಸಾ-2 ರವರು ಪ್ರಥಮ ಬಾರಿಗೆ ತಿಳಿಸಿರುತ್ತಾರೆ. ಚಾಸಾ-2 ರವರ ಹೇಳಿಕೆಯಂತೆ ನಾನು ನಿಪಿ-1 ದೂರನ್ನು ನೀಡಿದ್ದೇನೆ. ಆರೋಪಿಯ ಅತೀವೇಗದ ಚಾಲನೆಯನ್ನು ಆ ದಿನ ಯಾರು ನೋಡಿರುವುದಿಲ್ಲ. ನನ್ನ ದನಕ್ಕೆ ನಾನು ವಿಮೆಯನ್ನು ಮಾಡಿರಲಿಲ್ಲ. ನಿಪಿ-3 ರಲ್ಲಿ ಚಾಸಾ-2 ರವರ ಮನೆ ಕಾಣುವುದಿಲ್ಲ.

7. ನನ್ನ ದನದ ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತೇವೆ. ಸದ್ರಿ ಪರೀಕ್ಷೆಯನ್ನು ನಾನು ಮಾಡಿಸಿರುತ್ತೇನೆ. ಮರಣೋತ್ತರ ಪರೀಕ್ಷೆಯ ವರದಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ಸದ್ರಿ ವರದಿಯಲ್ಲಿ ಏನು ಇತ್ತು ಎಂದು ಗೊತ್ತಿಲ್ಲ. ಸಾಮಾನ್ಯವಾಗಿ ದನಗಳು ಮೇಯಲು ಹೋದಾಗ ಹಾರುವಾಗ ತಂತಿಬೇಲಿಗೆ ಸಿಕ್ಕಿ ಬಿದ್ದರೆ ನಿಪಿ-8 ರಲ್ಲಿ ಕಾಣುವ ಗಾಯಗಳು ಆಗುವ ಸಂಭವ ಇದೆ. ನಿಪಿ-8 ಫೋಟೋಗಳನ್ನು ತಾಗಿದ ಜಾಗದಲ್ಲಿ ತೆಗೆಯಲಾಗಿದೆ. ಅದೆ ಜಾಗದಲ್ಲಿ ಪೊಲೀಸರು ನಿಪಿ-3 ನಕ್ಷೆಯನ್ನು ಮಾಡಿರುತ್ತಾರೆ. ಆ ನಕ್ಷೆಗೆ ತಕ್ಕಂತೆ ನಿಪಿ-2 ಮಹಜರನ್ನು ಮಾಡಿರುತ್ತಾರೆ. ನಾನು ನಿಪಿ-1 ರಲ್ಲಿ ಚಾಸಾ-2 ರವರು ನನಗೆ

ಘಟನೆ ಬಗ್ಗೆ ತಿಳಿಸಿದ ಕಾರಣ ಈ ಪ್ರಕರಣದ ವಿಚಾರ ಗೊತ್ತಾಯಿತು ಎಂದು ನಮೂದು ಮಾಡದೆ ಇರಲು ಕಾರಣ ನಾನು ಪೊಲೀಸರಲ್ಲಿ ಹೇಳಿದ್ದೆ , ಆದರೆ ಅವರು ನಮೂದು ಮಾಡಿರುವುದಿಲ್ಲ.

8. ನನ್ನ ದನಕ್ಕೆ ವಿಮೆ ಇಲ್ಲದ ಕಾರಣ ಅದು ಮರಣಹೊಂದಿದಕ್ಕೆ ಪರಿಹಾರ ಪಡೆಯಲು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದಿಸಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪಂಚರ ಸಮಕ್ಷಮ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಮತ್ತು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ . ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಸ್ವತ್ತು ಸ್ವಾ ಧೀನತ ಮಹಜರನ್ನು ಪೊಲೀಸರು ಠಾಣೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ವಾಹನಕ್ಕೂ ಈ ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ